# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ 479/2025** **ಸಿ. ಡಬ್ಲ್ಯು: 01**

**ಪಿ ಡಬ್ಲ್ಯು: 01**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ | ಚಂದ್ರ ಹೆಚ್ ಎಸ್<br>ಶಿವಣ್ಣ<br>39 ವರ್ಷ<br>ಅಬಕಾರಿ ಮುಖ್ಯ ಪೇದೆ, ನಂಜನಗೂಡು ವಲಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 24-02-2026** |

**ಮುಖ್ಯ ವಿಚಾರಣೆ: ಶ್ರೀ ಎಪಿಪಿ ವಕೀಲರಿಂದ:**

ನಾನು ದಿ: 06-02-2024 ರಿಂದ ನಂಜನಗೂಡು ಅಬಕಾರಿ ನೀರಿಕ್ಷಕರ ಕಚೇರಿಯಲ್ಲಿ ಅಬಕಾರಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.30-09-2024 ರಂದು ಚಾಸಾ-2 ರಿಂದ 4 ರವರೊಂದಿಗೆ ಗಸ್ತು ಗ ಸರ್ಕಾರಿ ವಾಹನ ಸಂ.ಕೆಎ-09-ಜಿ-0862 ರಲ್ಲಿ ತೆರಳಾಗಿ ಕೊತ್ತನಹಳ್ಳಿ ಗ್ರಾಮದಲ್ಲಿ ಸಂಜೆ 6-20 ಗಂಟೆ ಸಮಯದಲ್ಲಿ ಗಸ್ತುಮಾಡುತ್ತಿರುವಾಗ ಬಂದ ದೂರಿನ ಅನ್ವಯ ಕೊತ್ತನಹಳ್ಳಿ ಗ್ರಾಮಕ್ಕೆ ತೆರಿಗೆ ಮಲ್ಲು ಬಿನ್ ದಾಸೇಗೌಡ ಅವರ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿರುವುದಾಗಿ ಬಂದ ಖಚಿತ ಮಾಹಿತಿ ಮೇರೆಗೆ ಕೊತ್ತನಹಳ್ಳಿ ಗ್ರಾಮಕ್ಕೆ ತೆರಳಿ ಸ್ಥಳಿಯರನ್ನು ಬರಮಾಡಿಕೊಂಡು ನಾವುಗಳು ಬಂದಿರುವ ವಿಷಯವನ್ನು ತಿಳಿಸಿ ಪಂಚರಾಗಲು

ಕೋರಿದಾಗ ಸ್ಥಳಿಯರು ನಿರಾಕರಿಸಿದ ಕಾರಣ ಇಲಾಖಾ ಸಿಬ್ಬಂದಿಗಳಾದ ನಮ್ಮನ್ನೇ ಪಂಚರನ್ನಾಗಿಸಿಕೊಂಡು ನಂತರ ಸಂಜೆ 6-40 ರಲ್ಲಿ ಮಲ್ಲು ಬಿನ್ ದಾಸೇಗೌಡ ಎಂಬುವವರ ಮನೆಯ ಬಳಿ ಬಂದಾಗ ಮನೆಯ ಬಾಗಿಲ ಬಳಿ ತೆರಳಿ ಘನ ನ್ಯಾಯಾಲಯದಿಂದ ಶೋಧನ ವಾರೆಂಟ್ ತರಲು ಸಮಯ ಇಲ್ಲ ಕಾರಣ ಮತ್ತು ಪ್ರಕರಣ ಕೈ ತಪ್ಪಿ ಹೋಗುವ ಸಂಭವ ಇರುವ ಕಾರಣದಿಂದಾಗಿ ಚಾಸಾ-4 ರವರ ಸ್ಥಳದಲ್ಲಿಯೇ ಶೋಧನಾ ವಾರೆಂಟ್ ತಯಾರಿಸಿ ನಾವುಗಳು ಸದರಿ ಮನೆಯ ಒಳಗೆ ಹೋಗಿ ಶೋಧನೆ ಮಾಡಲಾಗಿ ಒಬ್ಬ ಅಸಾಮಿ ನಿಂತಿದ್ದು ಅವರ ಹೆಸರನ್ನು ಕೇಳಲಾಗಿ ಮಲ್ಲು ಬಿನ್ ದಾಸೇಗೌಡ ಎಂಬುದಾಗಿ ತಿಳಿಸಿದರುತ್ತಾರೆ. ನಂತರ ಮನೆ ಶೋದನ, ಮಾಡಲಾಗಿ ಮನೆಯ ಹಜಾರದಲ್ಲಿ ಬಿಸ್ಕೆಟ್ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ಆ ಚೀಲವನ್ನು ತೆರೆದು ನೋಡಲಾಗಿ ಮಧ್ಯ ತುಂಬಿಸಿ ಟೆಟ್ರಾ ಪ್ಯಾಕ್ ಗಳು ಇದ್ದು 90 ಮಿಲಿಯ ಒರಿಜನಲ್ ಚಾಯ್ಸು ವಿಸ್ಕಿ 48 ಟೆಟ್ರಾ ಪ್ಯಾಕ್ ಗಳು .

90 ಮಿಲಿಯ ಒಲ್ಡ್ ಟವರಿಂಗ್ ವಿಸ್ಕಿ 16 ಟೆಟ್ರಾ ಪ್ಯಾಕ್ ಗಳು .

90 ಮಿಲಿಯ ಒಲ್ಡ್ ಮಾಂಕ್ ರಮ್ 9 ಟೆಟ್ರಾ ಪ್ಯಾಕ್ ಗಳು .

90 ಮಿಲಿಯ ಬ್ಯಾಕ್ ಪೈಪರ್ 4 ಟೆಟ್ರಾ ಪ್ಯಾಕ್ ಗಳು ಮತ್ತು

180 ಮಿಲಿಯ ಬ್ಯಾಕ್ ಪೈಪರ್ ವಿಸ್ಕಿ 4 ಟೆಟ್ರಾ ಪ್ಯಾಕ್ ಗಳು ಒಟ್ಟು ಮಧ್ಯ 7.650 ಲೀಟರ್ ಮಧ್ಯ ಇರುತ್ತದೆ. ನಂತರ ಇದನ್ನು ಇಟ್ಟುಕೊಳ್ಳಲು ಲೈಸೆನ್ಸ್ ಇದೆಯಾ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಏತಕ್ಕಾಗಿ ದಾಸ್ತಾನು ಮಾಡಿದ್ದೀಯ ಎಂದು ಕೇಳಲಾಗಿ ಪಾನೀಕರಿಗೆ ಮಾರಾಟ ಮಾಡಲು ಎಂದು ತಿಳಿಸಿರುತ್ತಾನೆ. ನಂತರ ಈ ರೀತಿ ದಾಸ್ತಾನು ಮಾಡಿ ಇಟ್ಟಿರುವುದು ಕರ್ನಾಟ ಅಬಕಾರಿ ಖಾಯಿದೆ 1965 ರ ಕಲಂ ಅನ್ವಯ ಅಪರಾಧ ಎಂದು ಎಂದು ತಿಳಿಸಿ ನಂತರ ದೊರತ ಎಲ್ಲಾ ಮಧ್ಯ ದ ಟೆಟ್ರಾ ಪ್ಯಾಕ್ ಗಳನ್ನು

ರಾಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆದು ಮಾದರಿ ನಕಲು ಚೀಟಿ ಹಾಗೂ ಸಣ್ಣ ಚೀಟಿಗಳನ್ನು ತಯಾರಿಸಿ ಅವುಗಳಿಗೆ ಅಂಟಿಸಲಾಯಿತು. ಆರೋಪಿ ಯನ್ನು 35(3) ರಲ್ಲಿ ನೋಟೀಸು ಜಾರಿ ಮಾಡಲಾಯಿತು. ನಂತರ ಜಪ್ತು ಪಡಿಸಿದ ಮು ಮಾಲುಗಳನ್ನು ಇಲಾಖಾ ವಶಕ್ಕೆ ಪಡಿಯಲಾಯಿತು. ನಂತರ ಚಾಸಾ-2 ರವರು

ಬರವಣಿಗೆ ಮಾಡಿ ಅದಕ್ಕೆ 3 ಮತುತ 4 ರವರುಗಳು ಸಹಿ ಮಾಡಿರುತ್ತಾರೆ. ರಾಸಾಯನಿಕ ವಿಶ್ಲೇಷಣಾ ವರದಿಯನ್ನು ದಿಃ 07-12-2024 ರಂದು ಕಛೇರಿಗೆ ತಂದು ಅಬಕಾರಿ ಉಪ ನೀರಿಕ್ಷಕರಿಗೆ ಸಲ್ಲಿಸಿರುತ್ತೇನೆ. ದಿಃ 07-12-2024 ರಂದು ಮೇಲಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿ ಯನ್ನು ನೋಡಿ ಗುರುತಿಸುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆ ತೋರಿದ್ದು ಅದು ಮಹಜರ್ ಆಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೇ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ರಿಂದ 5 ಎಂದು, ಚೀಲವನ್ನು ಮು.ಮಾ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಜಿ ವಕೀಲರಿಂದಃ-**

ಆ ದಿನ ಗಸ್ತು ನಡಸೆಲು ನಾವು 4 ಗಂಟೆ ಸಮಯದಲ್ಲಿ ಠಾಣೆಯನ್ನು ಬಿಟ್ಟುರುತ್ತೇವೆ. ಆ ದಿನ ನೀವು ಯಾವ ಯಾವ ಊರಿನಲ್ಲಿ ಗಸ್ತು ಮಾಡಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಆ ದಿನ ಕೊತ್ತನಹಳ್ಳಿ , ದೇಗೂರು ಮತ್ತು ಬ್ಯಾಲಾರ್ ಊರಿನಲ್ಲಿ ಗಸ್ತು ಮಾಡಿದೆವು ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ಜಾಗದ ಗಸ್ತನ್ನು ಆದ ಬಳಿಕ ನಾವು ಕೊತ್ತನಹಳ್ಳಿ ಗ್ರಾಮದಲ್ಲಿ ಗಸ್ತು ಮಾಡಿದೆವು. ಅಂದಾಜು ಒಂದು ಊರಿನಲ್ಲಿ ಕಾಲು ಗಂಟೆ ಗಸ್ತನ್ನು ಮಾಡುತ್ತೇವೆ. ನಾವು ಕೊತ್ತನಹಳ್ಳಿ ಗ್ರಾಮಕ್ಕೆ ಹೋದಾಗ ಸಮಯ ಸುಮಾರು ಸಂಜೆ 6-20 ಆಗಿತ್ತು.

ದಾಳಿ ನಡೆಸಿದ ಮನೆ ನಂಬರ್ ಗೊತ್ತಿರುವುದಿಲ್ಲ ಅದರೆ ಅದು ಹಂಚಿನ ಮನೆ ಆಗಿರುತ್ತದೆ ಮತ್ತು ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ . ದಾಳಿ

ಮಾಡುವಾಗ ನನ್ನ ಜೊತೆ ಅಬಕಾರಿ ನೀರಿಕ್ಷಕರು ಮತ್ತು ಅಬಕಾರಿ ಮುಖ್ಯ ಪೇದೆ ಮದುಕೇಶ್ವರ ಮತ್ತು ವಾಹನ ಚಾಲಕರಾದ ಶೀಲಾ ರವರು ಹೋಗಿರುತ್ತಾರೆ. ನಾವು ದಾಳಿ ನಡೆಸಿದ ಮನೆ ಹಂಚಿನ ಮನೆ ಆಗಿತ್ತು ಎಂದು ನಮ್ಮ ಪಿರ್ಯಾದಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾಳಿ ನಡೆಸುವಾಗ ಆ ಸ್ಥಳದಲ್ಲಿ ಅಕ್ಕ ಪಕ್ಕದವರು ಇದ್ದರು ಎಂದರೆ ಸರಿ. ಮತ್ತು ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಟೆಟ್ರಾ ಪ್ಯಾಕ್ ಗಳಿಗೆ ಪ್ರತ್ಯೇಕವಾಗಿ ಸಂಖ್ಯೆಯನ್ನು ಕೊಡುತ್ತಾರೆ ಎಂದರೆ ಸರಿ. ಟೆಟ್ರಾ ಪ್ಯಾಕ್ ಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂಬುದನ್ನು ನಾವು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಅಬಕಾರಿ ನಿರೀಕ್ಷಕರಿಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ದಿಃ 07-12-2024 ರಲ್ಲಿ ನಾನು ನೀಡಿರುವ ಹೇಳಿಕೆಯಲ್ಲಿ ಚೆಕ್ಕು ಬಂಧಿ ಯಲ್ಲಿ ಪೂರ್ವಕ್ಕೆ ಃ ಸಾರ್ವಜನಿಕ ರಸ್ತೆ , ಪಶ್ಚಿಮಕ್ಕೆಃ ವೃಷಬೇಂದ್ರ ರವರ ನಿವೇಶನ . ಉತ್ತರಕ್ಕೆ ಃಖಾಲಿ ನಿವೇಶನ ಮತ್ತು ದಕ್ಷಿಣಕ್ಕೆ ಃ ಪುಟ್ಟಯ್ಯರವರ ಮನೆ ಮೇಲೆ ಹೇಳಿದ ಚಕ್ಕುಬಂಧಿಯಲ್ಲಿ ಮು. ಮಾಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಮತ್ತು ನಮ್ಮ ಮಹಜರಿನಲ್ಲಿ ಪೂರ್ವಕ್ಕೆ ಃ ದೊಡ್ಡಸ್ವಾಮಿರವರ ಮನೆ , ಪಶ್ಚಿಮಕ್ಕೆಃ ಸಾರ್ವಜನಿಕ ರಸ್ತೆ ನಿವೇಶನ . ಉತ್ತರಕ್ಕೆ ಃರವಿ ರವರ ಖಾಲಿ ನಿವೇಶನ ಮತ್ತು ದಕ್ಷಿಣಕ್ಕೆ ಃ ಸಾರ್ವಜನಿಕ ರಸ್ತೆ ಎಂದು ನಮೂದು ಮಾಡಿರುತ್ತೇವೆ ಎಂದರೆ ಸರಿ. ಈ ಎರಡು ಚಕ್ಕುಬಂಧಿಗಳು ವ್ಯತ್ಯಾಸವನ್ನು ಹೊಂದಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಹಜರಿನಲ್ಲಿ ಇರುವ ಚಕ್ಕು ಬಂಧಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯನ್ನು ಕೊಡುವಾಗ ಸರಿಯಾಗಿ ಹೇಳಿರುತ್ತೇನೆ ಆದರೆ ವಿಷಯಗಳನ್ನು ಬರೆಯುವಾಗ ತಪ್ಪಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ಟೆಟ್ರಾ ಪ್ಯಾಕೇಟ್ ಗಳನ್ನು ಪ್ರತ್ಯೇಕವಾಗಿ ಸೀಲು, ಸಹಿ , ಪ್ರಕರಣದ ಸಂಖ್ಯೆ ಯಾವುದನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಟೆಟ್ರಾ ಪ್ಯಾಕೇಟ್ ಗಳಿಗೆ ಪ್ರತ್ಯೇಕವಾಗಿ ಯಾವುದೇ ರೀತಿಯ ಗುರುತುಗಳನ್ನು ಕೊಟ್ಟಿರುವುದಿಲ್ಲ.

ಸಾಮಾನ್ಯವಾಗಿ ಈ ರೀತಿಯ ಟೆಟ್ರಾ ಪ್ಯಾಕೇಟ್ ಗಳು ಎಲ್ಲಾ ಮಧ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಮತ್ತು ನಮ್ಮ ಇಲಾಖೆಯಲ್ಲಿಯೂ ಈ ರೀತಿಯ ಟೆಟ್ರಾ ಪ್ಯಾಕೇಟ್ ಇರುತ್ತವೆ ಎಂದರೆ ಸರಿ. ಆರೋಪಿಗೂ, ಈ ಪ್ರಕರಣಕ್ಕೂ ಹಾಗೂ ಮುದ್ದೇ ಮಾಲುಗಳಿಗೊ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತುಕೇಳಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**